ಹಾಕಿಕೊಂಡಿದೆ. ಶ್ರಮ– ಹಣ ಉಳಿಸುವ ಸ್ನೇಹಪರ ತಂತ್ರಜ್ಞಾನವನ್ನು ಒದಗಿಸಿ ಈ ಉದ್ಯಮವನ್ನು ಉಳಿಸಿ ಬೆಳೆಸುವುದೇ ಮುಖ್ಯ ಉದ್ದೇಶ. ಇದೇ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಭಾರತಿಯ ಕಲೆಗಳು ಹಾಗೂ ಇನ್ನಿತರ ಕಲಾ ಸಂಬಂಧಿ ಕೌಶಲ್ಯಗಳಿಗೆ ನೆಲೆ ಒದಗಿಸಿ, ಉಳಿಸಿ ಬೆಳೆಸುತ್ತಿರುವ 'ಕಲೆ ನೆಲೆ' ಸಂಸ್ಥೆಯ ಜಾಹ್ನವಿ ಹಂಚಿನಮನಿ ಕುಲಕರ್ಣಿ, ಈ ಖಣಗಳಿಂದ ವಿವಿಧ ಉತ್ಪನ್ನಗಳನ್ನು ತಯಾರಿಸಿ ದೇಶ ವಿದೇಶಗಳಲ್ಲಿ ಪ್ರಖ್ಯಾತಗೊಳಿಸುತ್ತಿದ್ದಾರೆ. ಅವರ ಪ್ರಕಾರ ಇಂಥ ಅಪರೂಪದ ಕಲಾಪ್ರಕಾರಗಳನ್ನು ಹೊಸ ಜೀವನಶೈಲಿಗೆ ಮಾರ್ಪಡಿಸಿ ಮರುಜೀವ ತುಂಬುವುದೇ ಕಲೆನೆಲೆಯ ಮುಖ್ಯ ಉದ್ದೇಶ. ಆಗ ಅವರ ದೃಷ್ಟಿಗೆ ಗೋಚರವಾದದ್ದೇ ಗುಳೇದಗುಡ್ಡದ ನೇಕಾರರು.

'ಫರ್ನಿಶಿಂಗ್ ಹಿನ್ನೆಲೆಯಿಂದ ಬಂದ ನನಗೆ ಅದೇ ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸುವ ಬಯಕೆ. ಆದರೆ ಈ ಸಂಪೂರ್ಣ ಗ್ರಾಮ್ಯ ಕಳೆಯ ಖಣಗಳಿಂದ ಫರ್ನಿಶಿಂಗ್‌ಗಳನ್ನು ತಯಾರಿಸಿದರೆ ಆರ್ಥಿಕ ಮೇಲ್ವರ್ಗದ ಜನ ಇವುಗಳನ್ನು ಒಪ್ಪದಿರುವ ಭಯವೂ ಇತ್ತು. ಅಲ್ಲದೆ ಖಣದಲ್ಲಿ ಹೆಚ್ಚಿನ ಹಾಸಿನಂಥ ತಾಂತ್ರಿಕ ಸಮಸ್ಯೆಗಳೂ ಇದ್ದವು. ಇಂಥ ಸಮಸ್ಯೆಗಳನ್ನು ನಿಭಾಯಿಸಿ ನಾವು ಈ ಖಣದಿಂದ ತೋರಣಗಳು, ಕೈಚೀಲಗಳು, ಜಂಬದ ಚೀಲ, ಪೀಠೋಪಕರಣಗಳ ಹೊದಿಕೆ, ಐಪ್ಯಾಡ್‌ಗಳ ಹೊದಿಕೆ, ಬ್ಯಾಗಗಳು, ಕುಶನ್, ಪೊಟ್ಲಿ, ಲ್ಯಾಂಪ್ ಶೇಡ್‌ಗಳು, ದಿಂಬುಗಳ ಹೊದಿಕೆ ಇತ್ಯಾದಿ ವಸ್ತುಗಳನ್ನು ತಯಾರಿಸಿದೆವು. ಮಾರುಕಟ್ಟೆಯಲ್ಲಿ ಇಂಥ ಉತ್ಪನ್ನಗಳಿಗೆ ದೊರೆತ ಅತ್ಯುತ್ತಮ ಪ್ರತಿಕ್ರಿಯೆಯಿಂದ ಉತ್ತೇಜನ ಹೊಂದಿ ದೇಶ ವಿದೇಶಗಳಿಗಾಗಿ ವಿವಿಧ ಫರ್ನಿಶಿಂಗ್ ವಸ್ತುಗಳನ್ನು ತಯಾರಿಸಿದೆವು. ಆದರೆ, ಇದರಿಂದ ನೇಕಾರರಿಗೆ ಆದ ಪ್ರಯೋಜನ ನಗಣ್ಯವಾಗಿತ್ತು. 'ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ' ಎಂಬಂತೆ ನಮ್ಮ ಮುಂದಿನ ಯೋಜನೆ ನೇಕಾರರು ತಾವಾಗಿಯೇ ನೇರವಾಗಿ ಮಾರುಕಟ್ಟೆಗೆ ಕೊಂಡೊಯ್ಯುವಂಥ ಹೆಚ್ಚಿನ ಲಾಭ ತರುವ ಉತ್ಪನ್ನಗಳನ್ನು ಸೃಷ್ಟಿಸುವುದಾಗಿತ್ತು. ಕಲೆನೆಲೆಯ ಬೆಂಬಲವಿಲ್ಲದೆಯೇ ಈ ಖಣದ ಬಟ್ಟೆಯಿಂದ ಸೀರೆಗಳನ್ನೇ ನೇಯುವಂತಾದರೆ? ಹೀಗೆ ಸೃಷ್ಟಿಸಿದ ಹೊಸ ಯೋಜನೆಯ ಫಲಶ್ರುತಿಯೇ ಖಣದ ಸೀರೆ. ಈ ಯೋಜನೆಯ ಪ್ರತಿ ಹಂತದಲ್ಲಿ ಸಹಕರಿಸಿ ಬೆಂಬಲಿಸಿದ ಘನಶ್ಯಾಮದಾಸ್ ಹಾಗೂ ಸಂಪತ್ ಕುಮಾರ್ ಅವರ ಸಹಾಯವನ್ನು ನೆನೆಯಲೇಬೇಕು ಎನ್ನುತ್ತಾರೆ ಜಾಹ್ನವಿ.

## ರೂಪಾಂತರ!

ಖಣದ ಸೀರೆಯ ಈ ರೂಪಾಂತರದ ಪ್ರಯತ್ನ ತುಂಬಾ ಆಸಕ್ತಿದಾಯಕವಾಗಿದ್ದರೂ ಇದರ ಯಶಸ್ಸಿನ ಬಗ್ಗೆ ತುಂಬ ಅನುಮಾನ, ಆತಂಕಗಳೂ ಇದ್ದವು. ಖಣದ ಸೀರೆಗೆ ಬೇಕಾದ ಒಡಲು, ಸೆರಗು, ಅಂಚುಗಳ ನಿಖರ ಅಳತೆ, ಸೂಕ್ತ ವಿನ್ಯಾಸಗಳು, ಬಣ್ಣಗಳು, ವರ್ಣ ಸಂಯೋಜನೆ, ನೂಲು ಇತ್ಯಾದಿಗಳನ್ನು ಕಲ್ಪಿಸಿ, ಯೋಚಿಸಿ ಈ ಕನಸಿನ ಸೃಜನಶೀಲ ಯೋಜನೆಯನ್ನು



ಫಾಲ್ಕೆ ಪ್ರಶಸ್ತಿ ಪುರಸ್ಕೃತ ಇಂದಿರಾ ಕೃಷ್ಣ

ಸಾಕಾರಗೊಳಿಸುವುದು ಒಂದು ದೊಡ್ಡ ಸವಾಲೇ ಆಗಿತ್ತು. ಕೊನೆಗೂ 2015 ರಲ್ಲೇ ಕನಸಿದ್ದ ಈ ಕಲ್ಪನೆ ನನಸಾಗಿ ಆಗಸ್ಟ್, 2017 ರಂದು ಪ್ರಪ್ರಥಮ ಖಣದ ಸೀರೆ ಮಾರ್ಪಡಿಸಿದ ಮಗ್ಗದಿಂದ ಹೊರಹೊಮ್ಮಿತು. ದೇಶದ ಪ್ರತಿಷ್ಠಿತ ಸೀರೆಗಳ ಸಾಲಿಗೆ ಇನ್ನೊಂದು ಸಾಂಪ್ರದಾಯಿಕ ಸೀರೆ ಸೇರ್ಪಡೆಯಾಯ್ತು. 'ಅದೊಂದು ನನ್ನ ಬದುಕಿನ ಸಾರ್ಥಕ ಕ್ಷಣ' ಎಂದು ಜ್ಞಾಪಿಸಿಕೊಳ್ಳುತ್ತಾರೆ ಜಾಹ್ನವಿ. ಅವರಿಗಷ್ಟೇ ಅಲ್ಲ; ಈ ಸೀರೆ ನೇಯ್ದ ನೇಕಾರ, ಕಲೆ–ನೆಲೆ ಡಿಸೈನ್ ಸ್ಟುಡಿಯೋದ ಸಿಬ್ಬಂದಿ ಎಲ್ಲರಿಗೂ ಅಂದು ಧನ್ಯತೆಯ ಭಾವ!

ಕೊನೆಗೂ 2017ರ ಅಕ್ಟೋಬರ್ ಒಂದರಂದು ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಹಿಂದಿ ಚಿತ್ರರಂಗದ ಪ್ರಖ್ಯಾತ ನಟಿ ವೈಜಯಂತಿಮಾಲಾ ಬಾಲಿರವರ ಸಮ್ಮುಖದಲ್ಲಿ ನಡೆದ ವಸ್ತ್ರಾಭರಣ ಪ್ರದರ್ಶನದಲ್ಲಿ ಈ ಸೀರೆಯ ಬಿಡುಗಡೆಯೂ ಆಯಿತು. ಮತ್ತೆ ಇಂಥ ಕೆಲ ಸೀರೆಗಳನ್ನು ನೇಯ್ದು ಸೀಮಿತ ಮಾರುಕಟ್ಟೆಗೆ ಬಿಟ್ಟಾಗ ದೊರಕಿದ ಪ್ರತಿಕ್ರಿಯೆ ಊಹೆಗೂ ಮೀರಿದ್ದು. ತಮ್ಮ ವಿಶಿಷ್ಟ ಸೌಂದರ್ಯ ಸೃಜನಶೀಲತೆಗಳಿಂದ ಈ ಖಣದ ಸೀರೆಯ ಬೇಡಿಕೆ ಒಮ್ಮೆಲೆ ಹೆಚ್ಚಾಯಿತು. ಮಹಿಳೆಯರು ಇಂಥ ನವೀನ ವಿನ್ಯಾಸದ ಸೀರೆಯನ್ನು ಖರೀದಿಸಲು ಮುಗಿಬಿದ್ದರು. ಅಂದು ಒಂದು ಮಗ್ಗದಿಂದ ಪ್ರಾರಂಭವಾದ ಖಣದ ಸೀರೆಯ ಮಗ್ಗಗಳ ಸಂಖ್ಯೆ ಇಂದು ಇನ್ನೂರನ್ನು ಸಮೀಪಿಸುತ್ತಿದೆ! ದಿನ ದಿನಕ್ಕೂ ಈ ಸೀರೆಗಳಿಗೆ ಬೇಡಿಕೆ ಹೆಚ್ಚುತ್ತಲೇ ಇದೆ! ಒಂದು ಅಂದಾಜಿನಂತೆ ಇಂದು ಪ್ರತಿ ತಿಂಗಳು 15ರಿಂದ 18 ಸಾವಿರ ಖಣದ ಸೀರೆಗಳನ್ನು ಗುಳೇದಗುಡ್ಡ, ರಾಮದುರ್ಗ, ಕೆರೂರ ಹಾಗೂ ಕಮತಗಿಯಲ್ಲಿ ಉತ್ಪಾದಿಸಲಾಗುತ್ತಿದೆ.

## ಹಾಲು ಜೇನು!

ಈ ಸೀರೆಗಳಿಗಾಗಿ ವಿವಿಧ ಬಣ್ಣದ ವಿನ್ಯಾಸ ಹಾಗೂ ವರ್ಣ ಯೋಜನೆಯ ಖಣಗಳನ್ನು ರೂಪಿಸಲಾಗಿದೆ. ಎರಡೂ ಕಡೆ ಬೇರೆ ಬೇರೆ ಬಣ್ಣಗಳನ್ನು ಹೊಂದಿರುವ 'ಗಂಗಾಜಮುನಾ' ಅಂಚಿನ ಖಣಗಳು ಅತ್ಯಾಕರ್ಷಕವಾಗಿವೆ. ಇಳಕಲ್ಲಿನ 'ತೊಪತೆನಿ' ವಿನ್ಯಾಸದ ಸೀರೆಗಳೊಂದಿಗೂ ಈ ಖಣ ಅತ್ಯದ್ಭುತವಾಗಿ ಹೊಂದಿಕೊಳ್ಳುತ್ತದೆ.

'ಖಣದ ಸೀರೆಯ ಒಡಲು, ಸೆರಗು ಹಾಗೂ ಅಂಚುಗಳಿಗೆ ಹೊಂದುವ ಖಣಗಳನ್ನು ನಾವೀಗ ಉತ್ಪಾದಿಸುತ್ತಿದ್ದೇವೆ. ಅಂತರಾಷ್ಟ್ರೀಯ ಮಾರುಕಟ್ಟೆಗಾಗಿ ಸಾಂಪ್ರದಾಯಿಕ ಸೀರೆಯ ಗಾಢ ಬಣ್ಣಗಳಿಗೆ ಬದಲಾಗಿ ಕಣ್ಣಿಗೆ ಹಿತವಾದ ಮಧ್ಯಮ ಹಾಗೂ ತಿಳಿ ಬಣ್ಣಗಳ ಸೀರೆಗಳನ್ನು ತಯಾರಿಸುತ್ತಿದ್ದೇವೆ. ಈ ರೀತಿ ಮಾರ್ಪಡಿಸಿದ ಖಣಗಳನ್ನು ಇದೇ ರೀತಿ ವರ್ಣಾಂತರಗೊಂಡ ಇಳಕಲ್ ಸೀರೆಗಳಿಗೆ ಮ್ಯಾಚಿಂಗ್ ರವಿಕೆ ಬಟ್ಟೆಯಾಗಿ ಜೋಡಿಸಲು ಕಳುಹಿಸುತ್ತಾರೆ. ಇಂಥ ಹಿತಕರ ಬಣ್ಣಗಳ ಸೀರೆ ಹಾಗೂ ಗುಳೇದಗುಡ್ಡದ ಖಣಗಳಿದ್ದು ಹಾಲು ಜೇನಿನಂಥ ಸಂಯೋಜನೆ ಎನ್ನುತ್ತಾರೆ ಜಾಹ್ನವಿ.

ನಿನ್ನನ್ನು ಕಂಡ ಕಣ್ಣು ಬೇರೇನೂ ನೋಡದಿನ್ನು! ವಡೋದರದ ಮಹಾರಾಣಿ ರಾಧಿಕಾರಾಜೇ ಗಾಯಕವಾಡ ಹಾಗೂ ದಾದಾ ಸಾಹೇಬ ಫಾಲ್ಕೆ ಪ್ರಶಸ್ತಿ ನಟಿ ಇಂದಿರಾ ಕೃಷ್ಣ, ಮರಾಠಿ ರಂಗಭೂಮಿ, ಸಿನಿಮಾ ರಂಗದ ಖ್ಯಾತ ನಟಿ ಶಮಾ ದೇಶಪಾಂಡೆ ಹಾಗೂ ಇನ್ನಿತರರಿಗೆ ಈ ಸೀರೆಗಳೆಂದರೆ ಪಂಚಪ್ರಾಣ. ಇಂದಿರಾ ಕೃಷ್ಣ ಅವರಿಗಂತೂ ಖಣದ ಸೀರೆಗಳೆಂದರೆ ತುಂಬಾ ಅಚ್ಚುಮೆಚ್ಚು. 'ಕಲೆ ನೆಲೆ'ಗೆ ಭೇಟಿ ನೀಡಿದ ಅವರು ಜಾಹ್ನವಿಯವರಿಗೆ ನೇಕಾರರ ಬಗೆಗಿರುವ ಕಾಳಜಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಈ ಸೀರೆಗಳ ಸಾಂಪ್ರದಾಯಿಕ ಸೌಂದರ್ಯ, ಲಾಲಿತ್ಯ, ತಾಜಾತನ, ಆಕರ್ಷಕ ವರ್ಣ ಸಂಯೋಜನೆ, ದಿಟ್ಟ ಉಜ್ವಲ ಬಣ್ಣಗಳು, ಇದಕ್ಕೆ ಹೊಂದುವಂಥ ಖಣದ ವಿನ್ಯಾಸಗಳು ಮನಕ್ಕೆ ಮುದ ನೀಡುತ್ತವೆ. ಇದು ಸಾಲದು ಎಂಬಂತೆ ಮರ, ಬಟ್ಟೆ, ವಿವಿಧ ನೂಲು, ಶಂಖಗಳು, ಮುತ್ತುಗಳು, ಬೆಳ್ಳಿಯ ವಿವಿಧ ಆಭರಣಗಳನ್ನು ವಿನ್ಯಾಸಗೊಳಿಸುವಲ್ಲಿ ನಿರತರಾಗಿದ್ದಾರೆ ಜಾಹ್ನವಿ. ಇಂಥ ಅಪರೂಪದ ಸೀರೆಗಳೀಗ 'ಕಲೆನೆಲೆ'ಯಲ್ಲಿ ಲಭ್ಯ! ■

## ಮಗಳು ಜಾಹ್ನವಿ!

ಬಾಗಲಕೋಟೆ ಜಿಲ್ಲೆಯ ಕಮತಗಿಯಲ್ಲಿ 94 ವರ್ಷದ ರೇಣುಕವ್ವ ಹಣಗಿ ಎಂಬ ಹಿರಿಯ ಜೀವ ಸೀರೆ ನೇಯುವುದನ್ನು, ಕಸೂತಿ ಹಾಕುವುದನ್ನು ಇನ್ನೂ ಬಿಟ್ಟಿಲ್ಲ. ಗುಳೇದಗುಡ್ಡದ ಖಣ ಹಾಗೂ ಇಳಕಲ್ ಸೀರೆಗಳ ಬಗ್ಗೆ ಕೆಲಸ ಮಾಡುತ್ತಿರುವ ಜಾಹ್ನವಿಯವರ ಬಗ್ಗೆ ಈಕೆ ಹೇಳುವುದಿಷ್ಟೆ 'ಜಾಂದವಿ (ಜಾಹ್ನವಿ) ನಮ್ಮ ನೇಕಾರರ ಮನಿ ಮಗಳಿದ್ದಂಗ್ರಿ! ಇಕೀ ಪುಣ್ಯಾದಿಂದ ನಮ್ಮ ನೇಕಾರ್ರಿಗೆ ಒಳ್ಳೆದಾಗಾಕತ್ತದ್ರಿ!' ಮನಸ್ಸಿನಾಳದ ಎಂಥ ಹೃದಯಸ್ಪರ್ಶಿ ಮಾತುಗಳು! ಕೇಳಿಸ್ಕೊತ್ತಿದ್ದಿರಾ ಸೀತಾರಾಮ ಸರ್! ಇಲ್ಲೂ ಒಬ್ಬರಿದ್ದಾರೆ ಮಗಳು ಜಾನಕಿ! ಅಲ್ಲಲ್ಲ ಮಗಳು ಜಾಹ್ನವಿ!

ಸಂಪರ್ಕಕ್ಕೆ: janhavi.kalenele@gmail.com